# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 GEN 44 2002/6831 Date: 08/08/2008

ರಿಗೆ,

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್
ರಾಜ್ಯದ ಎಲ್ಲಾ ಆಯುಕ್ತರು, ಪೌರಾಯುಕ್ತರು, ಮುಖ್ಯಾಧಿಕಾರಿಗಳು

**ಪರಿಷ್ಕೃತ ಆದೇಶ**

ಮಾನ್ಯರೇ,

ವಿಷಯ: ವಿಶೇಷ ವರ್ಗಕ್ಕೆ ಸೇರಿದ ಫಲಾನುಭವಿಗಳಗೆ ಗುರಿಯನ್ನು ನಿಗದಿ ಪಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ ವಇ/85/ಹೆಚ್‌ಎಎಂ/2007, ದಿನಾಂಕ 12.03.2007.
2. ಸರ್ಕಾರದ ಸುತ್ತೋಲೆ ಸಂಖ್ಯೆ ವಇ/166/ಹೆಚ್‌ಎಎಂ/2007, ದಿನಾಂಕ 07.08.2007.
3. ನಿಗಮದ ಪತ್ರ ಸಂ. MD RGRHCL 01 GEN 31 2002, Dated 28.03.2007.
4. ನಿಗಮದ ಪತ್ರ ಸಂ. MD RGRHCL 01 GEN 32 2002, Dated-07/08/2008.

-----

ಉಲ್ಲೇಖ ಪತ್ರ (1)ರಲ್ಲಿ ಹೊರಡಿಸಲಾದ 10 ವಿಶೇಷ ವರ್ಗಗಳನ್ನು ಉಲ್ಲೇಖ ಪತ್ರ (4) ರಲ್ಲಿ 3 ಪ್ರವರ್ಗಗಳನ್ನಾಗಿ ವಿಂಗಡಿಸಿ, ಉಲ್ಲೇಖ ಪತ್ರ (3) ರಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸುವ ಬಗ್ಗೆ ವಿವರವಾಗಿ ನಿಗಮವು ಆದೇಶ ಹೊರಡಿಸಿತ್ತು. ತದನಂತರ ಸರ್ಕಾರವು ಉಲ್ಲೇಖ ಪತ್ರ (2)ರಲ್ಲಿ ಮತ್ತೇ 5 ವರ್ಗಗಳನ್ನು ವಿಶೇಷ ವರ್ಗಗಳ ಗುಂಪಿಗೆ ಸೇರಿಸಿ ಆದೇಶ ಹೊರಡಿಸಿರುವುದರಿಂದ ಈ 5 ವರ್ಗಗಳನ್ನು ಸೇರಿಸಿ ಒಟ್ಟು 15 ವಿಶೇಷ ವರ್ಗಗಳನ್ನು 3 ಪ್ರವರ್ಗಗಳಾಗಿ ವಿಂಗಡಿಸಿ ಮರು ಆದೇಶ ಹೊರಡಿಸಲಾಗಿದೆ. ಈ ಪ್ರವರ್ಗಗಳಗೆ ವಸತಿ ಸೌಕರ್ಯವನ್ನು ಉಲ್ಲೇಖ ಪತ್ರ (3) ರಲ್ಲಿ ತಿಳಸಿದಂತೆ ಕಲ್ಪಿಸಿಕೊಡಲು ತಿಳಸಲಾಗಿದೆ.

ವಿಶೇಷ ವರ್ಗದ ಫಲಾನುಭವಿಗಳಗೆ ಸಂಬಂಧಿಸಿದಂತೆ ಜರುಗಿಸಬೇಕಾದ ಕ್ರಮ ಈ ಕೆಳಗಿನಂತೆ ವಿವರಿಸಲಾಗಿದೆ.

| ಪ್ರವರ್ಗ | ವಿಶೇಷ ವರ್ಗ | ಜರುಗಿಸಬೇಕಾದ ಕ್ರಮ |
|---|---|---|
| ಪ್ರವರ್ಗ A | 1 ಅಂಗವಿಕಲರು.<br>2 ಕುಷ್ಟರೋಗದಿಂದ ಗುಣಮುಖರಾದವರು.<br>3 ಹೆಚ್‌ಐವಿ +ve ಸೋಂಕಿಗೆ ಒಳಗಾದವರು.<br>4 ದೇವದಾಸಿಯರು ಮತ್ತು ಇತರೆ ದೌರ್ಜನ್ಯಕ್ಕೊಳಗಾದ ಮಹಿಳೆಯರು.<br><br>**ಫಲಾನುಭವಿಗಳು ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಅರ್ಹರಾಗಿದ್ದಲ್ಲಿ ಮಾತ್ರ.** | ಉಲ್ಲೇಖಿತ (1) ತಿಳಸಿರುವಂತೆ ಸಂಬಂಧ ಪಟ್ಟ ಇಲಾಖೆಗಳು ಫಲಾನುಭವಿಗಳನ್ನು ಆಯ್ಕೆ ಮಾಡಿ ಉಲ್ಲೇಖಿತ (3)ರಲ್ಲಿ ತಿಳಸಿರುವಂತೆ ಕ್ರಮ ಕೈಗೊಂಡು ನಿಗಮಕ್ಕೆ ಸಲ್ಲಿಸಲಾಗುವ ಎಲ್ಲಾ ಫಲಾನುಭವಿಗಳಗೆ ಮನೆಗಳನ್ನು ನೀಡಲಾಗುವುದು. ರಾಜ್ಯದಲ್ಲಿ ಈ ವರ್ಗದ ಅರ್ಹ ಫಲಾನುಭವಿಗಳು ಸಂಪೂರ್ಣವಾಗಿ ಮುಕ್ತಾಯವಾಗುವರೆಗೂ ಮನೆಗಳನ್ನು ನೀಡಲಾಗುವುದು. ಯಾವುದೇ ನಿರ್ದಿಷ್ಟ ಗುರಿಯನ್ನು ನಿಗದಿಪಡಿಸಿರುವುದಿಲ್ಲ. |

ನೊಂದಾಯಿತ ಕಛೇರಿ 4ನೇ ಮಹಡಿ, ಕೆ.ಹೆಚ್.ಬಿ.ಕಾಂಪ್ಲೆಕ್ಸ್, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು 560 009
✆ ಕಛೇರಿ 91-80-2223 2065, 2223 2067, 2222 7558, 2223 8001 ಫ್ಯಾಕ್ಸ್ 91-80-2223 2066
ಈ-ಮೇಲ್ : rgrhcl@kar.nic.in ವೆಬ್ http://ashraya.kar.nic.in

| ಪ್ರವರ್ಗ | ವಿಶೇಷ ವರ್ಗ | ಜರುಗಿಸಬೇಕಾದ ಕ್ರಮ |
|---|---|---|
| ಪ್ರವರ್ಗ B | 1 ಅರಣ್ಯ ಪ್ರದೇಶದಿಂದ ಹಾಗೂ Tank ಪ್ರದೇಶಗಳ ಅತಿಕ್ರಮಣದಿಂದ ತೆರವುಗೊಳಸಲಾದ ನಿರಾಶ್ರಿತರು.<br>2 ಪ್ರವಾಹ ಪೀಡಿತರು.<br>3 ದೌರ್ಜನ್ಯಕ್ಕೆ ಒಳಗಾದವರು<br>4 ಮತೀಯ ಗಲಭೆಗೆ ಹಾಗೂ ಚಳವಳಗಳಂದ ಹಾನಿಗ್ಗೊಳಗಾದವರು.<br>5 ಜೀತದಿಂದ ಮುಕ್ತರಾದವರು<br><br>**ಫಲಾನುಭವಿಗ್ಗಳು ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಅರ್ಹರಾಗಿದ್ದಲ್ಲಿ ಮಾತ್ರ.** | ಈ ವರ್ಗದ ಫಲಾನುಭವಿಗಳಗೆ ಘಟನೆಯನ್ನು ಆಧರಿಸಿ ಉಲ್ಲೇಖ (1) ತಿಳಸಿರುವಂತೆ ಸಂಬಂಧ ಪಟ್ಟ ಇಲಾಖೆಗಳು ಫಲಾನುಭವಿಗಳನ್ನು ಆಯ್ಕೆ ಮಾಡಿ ಉಲ್ಲೇಖ (3)ರಲ್ಲಿ ತಿಳಸಿರುವಂತೆ ಕ್ರಮ ಕೈಗೊಂಡು ನಿಗಮಕ್ಕೆ ಸಲ್ಲಿಸಲಾಗುವ ಎಲ್ಲಾ ಅರ್ಹ ಫಲಾನುಭವಿಗಳಗೆ ಮನೆಗಳನ್ನು ನೀಡಲಾಗುವುದು. |
| ಪ್ರವರ್ಗ C | 1 ನೇಕಾರರು, ಹಮಾಲರು, ಬೀಡಿ ಕಾರ್ಮಿಕರು ಹಾಗೂ ಕುಶಲಕರ್ಮಿಗಳು ಇತ್ಯಾದಿ.<br>2 ಅಂಗನವಾಡಿ ಕಾರ್ಯಕರ್ತೆಯರು.<br>3 ಮಾಜಿ ಸೈನಿಕರು.<br>4 ಕಾಯಂ ಅಥವಾ ಗುತ್ತಿಗೆ ಪೌರ ಕಾರ್ಮಿಕರು/ಸಫಾಯಿ ಕರ್ಮಚಾರಿಗಳು<br>5 ಅಲೆಮಾರಿ ಜನಂಗದವರು<br>6 ನಗರ ಪ್ರದೇಶಗಳಲ್ಲಿ ವಾಸಿಸುವ ಮನೆ ಕೆಲಸದವರು.<br>7 ಬೀದಿ ಬದಿ ತರಕಾರಿ ವ್ಯಾಪರಿಗಳು/ಪೆಟ್ಟಿಗೆ ಅಂಗಡಿ ತರಕಾರಿ ವ್ಯಾಪಾರಿಗಳು<br><br>**ಫಲಾನುಭವಿಗಳು ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಅರ್ಹರಾಗಿದ್ದಲ್ಲಿ ಮಾತ್ರ** | ಈ ವರ್ಗದ ಫಲಾನುಭವಿಗಳಗೆ ಸಂಬಂಧ ಪಟ್ಟ ಇಲಾಖೆಯಿಂದ ಗುರಿಯನ್ನು ನಿಗದಿ ಪಡಿಸಲಾಗುವುದು. ಗುರಿ ನಿಗದಿ ಪಡಿಸಿದ ನಂತರ ನಿಗಮದಿಂದ ಜಿಲ್ಲೆಗಳಗೆ ಗುರಿಯನ್ನು ತಿಳಸಲಾಗುವುದು. |

ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಉಲ್ಲೇಖ ಪತ್ರ (3)ರ ಪತ್ರದಲ್ಲಿ ತಿಳಸಿರುವಂತೆ ಕೂಡಲೇ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಎಲ್ಲಾ ಫಲಾನುಭವಿಗಳಗೆ ಮನೆ ನೀಡಲು ಕ್ರಮ ಕೈಗೊಳ್ಳುವುದು. ಯಾವುದೇ ಕಾರಣಕ್ಕೂ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ವರ್ಗಕ್ಕೆ ಸೇರಿದ ಅರ್ಹ ಫಲಾನುಭವಿಗಳು ಮನೆ ಇಲ್ಲದೆ ವಂಚಿತರಾಗದಂತೆ ನೋಡಿಕೊಳ್ಳಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಡಾ। ಹೆಚ್. ವಿ. ಪಾರ್ಶ್ವನಾಥ್
ವ್ಯವಸ್ಥಾಪಕ ನಿರ್ದೇಶಕರು